**ದಿನಾಂಕಃ23-10-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ- ಪ್ರತಿವಾದಿಗಳ ಪರ ಶ್ರೀ. ಎಂ.ಎನ್ , ವಕೀಲರಿಂದ:-**

**1.** ನಿಪಿ-1 ರ ವ್ಯವಹಾರಕ್ಕೆ ಸಂಬಂಧಿಸಿದಂತೆ ಕಲ್ಯ ಗೇಟ್ ನಲ್ಲಿ ಇರುವ ಪ್ರತಿವಾದಿಗಳು ವಾಸಿಸುತ್ತಿದ್ದ ಬಾಡಿಗೆ ಮನೆಯಲ್ಲಿ ಮಾತುಕತೆ ಆಗಿರುತ್ತದೆ. ನಿಪಿ-1 ನ್ನು ಮಾಡುವ ಒಂದು ವಾರದ ಹಿಂದೆ ಸದರಿ ಮಾತುಕತೆ ಆಗಿರುತ್ತದೆ. ಮಾತುಕತೆ ಮಾಡಿದ ದಿನದಂದು ಟೋಕನ್ ಅಡ್ವಾನ್ಸ್ ಆಗಿ ರೂ.5000/- ವನ್ನು ನೀಡಿರುತ್ತೇನೆ ಮತ್ತು ಅದಕ್ಕೆ ಸಂಬಂಧಿಸಿದಂತೆ ಯಾವುದೇ ಬರವಣಿಗೆ ಆಗಿರುವುದಿಲ್ಲ. ಮಾತುಕತೆಯನ್ನು ಮಾಡುವ ಸಮಯದಲ್ಲಿ ನಾನು, ಪ್ರತಿವಾದಿಗಳು ಮತ್ತು ಮಧ್ಯವರ್ತಿಯಾದ ಡೈರಿ ಮಂಜುರವರು ಇದ್ದರು. ಮೊದಲು ಮಾತುಕತೆ ಮಾಡುವ ಸಮಯದಲ್ಲಿ ರೂ. 2, 50,000/-ಕ್ಕೆ ಆಗಿರುತ್ತದೆ ನಂತರ ಅದನ್ನು ರೂ. 2,10,000/-ಕ್ಕೆ ತೀರ್ಮಾನಿಸಲಾಗಿತ್ತು. ನಿಪಿ-1 ನ್ನು ಮಾಡುವ ಸಮಯದಲ್ಲಿ ನಾನು ರೂ.95,000/-ವನ್ನು ಪ್ರತಿವಾದಿಗಳಿಗೆ ನೀಡಿರುತ್ತೇನೆ. ಆದಾದ ನಂತರ ಯಾವುದೇ ಹಣದ ವ್ಯವಹಾರವು ನಡೆದಿರುವುದಿಲ್ಲ. ಸಾಕ್ಷಿಯು ಮುಂದುವರೆದು ರೂ. 10,000/-ವನ್ನು ನೀಡಿರುತ್ತೇನೆ ಎಂದು ನುಡಿದಿರುತ್ತಾರೆ.

2. ನಿಪಿ-1 ನ್ನು ಮಾಡುವ ಸಮಯದಲ್ಲಿ ದಾವಾಸ್ವತ್ತಿನ ಬೆಲೆಯು ಸುಮಾರು ರೂ.10 ಲಕ್ಷ ಇತ್ತು ಎಂದರೆ ಸಾಕ್ಷಿಯು ಅದರ ಬಗ್ಗೆ ಗೊತ್ತಿಲ್ಲ ಎನ್ನುತ್ತಾರೆ. ಈ ಮೇಲ ಹೇಳಿರುವ ಹಾಗೆ ನಿಪಿ-1 ನ್ನು ಮಾಡುವ ಮೊದಲು ಕೇವಲ ಒಂದು ಬಾರಿ ಮಾತ್ರ ಮಾತುಕತೆ ಆಗಿರುತ್ತದೆ. ನಿಪಿ-1 ನ್ನು 1 ನೇ ಪ್ರತಿವಾದಿಯು ಮಾಯಣ್ಣ ಗೌಡರವರ ಅಂಗಡಿಯಲ್ಲಿ ಬೆರಳಚ್ಚು

ಮಾಡಿಸಿರುತ್ತಾರೆ. ಮಾಯಣ್ಣಗೌಡರವರು ಬಿಕ್ಲಂದಾರರು ಆಗಿರುತ್ತಾರೆ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ಸಾಕ್ಷಿಯು ಮುಂದುವರೆದು ನಿಪಿ-1 ಕ್ಕೆ ಅವರು ಬಿಕ್ಲಂದಾರರು ಆಗಿರುವುದಿಲ್ಲ ಎಂದು ನುಡಿದಿರುತ್ತಾರೆ. ನಿಪಿ-1 ನ್ನು ನನ್ನ ಸಮಕ್ಷಮದಲ್ಲಿಯೇ ಬೆರಳಚ್ಚು ಮಾಡಲಾಗಿದೆ. ನಿಪಿ-1 ನ್ನು ಬೆರಳಚ್ಚು ಮಾಡುವ ಸಮಯದಲ್ಲಿ ನಾನು, ಪ್ರತಿವಾದಿಗಳು ಮತ್ತು ಅವರ ಸಂಬಂಧಿಕರು ಇದ್ದರು, ಇವರನ್ನು ಹೊರತುಪಡಿಸಿ ಬೇರೆ ಯಾರೂ ಸಹ ಇರಲಿಲ್ಲ. ನೀವು ಮತ್ತು ಮಾಯಣ್ಣಗೌಡರು ಸ್ನೇಹಿತರು ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ನಿಪಿ-1 ರಲ್ಲಿ ಯಾವ ದಿನಾಂಕದಂದು ಮಾತುಕತೆಯನ್ನು ಮಾಡಲಾಗಿತ್ತು ಮತ್ತು ಯಾವ ದಿನಾಂಕದಂದು ನಾನು ಪ್ರತಿವಾದಿಗಳಿಗೆ ರೂ. 95 ಸಾವಿರ ಹಣವನ್ನು ನೀಡಿದ್ದೇನೆ ಎಂದು ನಮೂದಿಸಿರುವುದಿಲ್ಲ. ನಿಪಿ-1 ರಲ್ಲಿ 11-ಇ ಸ್ಕೆಚ್ ಬಗ್ಗೆ ನಮೂದಿಸಿರುವ ಬಗ್ಗೆ ನನಗೆ ಅಷ್ಟಾಗಿ ನೆನಪಿಲ್ಲ. ನಿಪಿ-1 ನ್ನು ಮಾಡುವ ಸಮಯದಲ್ಲಿ ನೋಂದಣಿ ಮಾಡಿಸಲು 11-ಇ ಸ್ಕೆಚ್ ಅವಶ್ಯಕತೆ ಇರಲಿಲ್ಲ ಎಂದರೆ ಸಾಕ್ಷಿಯು ಅದರ ಬಗ್ಗೆ ಗೊತ್ತಿಲ್ಲ ಎನ್ನುತ್ತರೆ. 11-ಇ ಸ್ಕೆಚ್ ಅವಶ್ಯಕತೆ ಇಲ್ಲದೇ ಇರುವ ಕಾರಣ ಅದರ ಬಗ್ಗೆ ನಿಪಿ-1 ರಲ್ಲಿ ನಮೂದಿಸಿರುವುದಿಲ್ಲ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ.

3. ನಿಪಿ-1 ನ್ನು ಮಾಡಿದ ಮೂರು ವರ್ಷಗಳ ಒಳಗೆ ನಾನು ನೋಂದಾಯಿತ ಕ್ರಯಪತ್ರವನ್ನು ಮಾಡಿಕೊಂಡುವಂತೆ ಕೋರಿ ಪ್ರತಿವಾದಿಗಳಿಗೆ ಯಾವುದೇ ರೀತಿಯ ನೋಟಿಸ್ ನ್ನು ಕಳುಹಿಸಿರುವುದಿಲ್ಲ. ನಿಪಿ-2 ರಂತೆ ದಿ.13-12-2016 ರಂದು ಪ್ರತಿವಾದಿಗಳಿಗೆ ನೋಟೀಸ್ ನ್ನು ಕಳುಹಿಸುವ ಮೊದಲು ನಾನು ಅವರಿಗೆ ಯಾವುದೇ ನೋಟೀಸ್ ನ್ನು ಕಳುಹಿಸಿರುವುದಿಲ್ಲ. ನಿಪಿ-1 ನ್ನು ಮಾಡಿದ ನಂತರ ನಿಪಿ-2 ರಂತೆ ನೋಟೀಸ್ ನ್ನು ಕಳುಹಿಸುವ ಮೊದಲು ನಿಮಗೆ ಬೇರೆ ನೋಟಿಸ ನ್ನು ಪ್ರತಿವಾದಿಗಳಿಗೆ ಕಳುಹಿಸಲು ಯಾವುದೇ ರೀತಿಯ ತೊಂದರೆ ಇರಲಿಲ್ಲ ಎಂದರೆ

ಸಾಕ್ಷಿಯು ಹೌದು ಎನ್ನುತ್ತಾರೆ. 1 ನೇ ಪ್ರತಿವಾದಿಯ ಆಂಗ್ಲ ಭಾಷೆಯಲ್ಲಿ ತನ್ನ ಸಹಿಯನ್ನು ಮಾಡುತ್ತಾರೆ.

**ಮುಂದುವರೆದ ಪಾಟೀ ಸವಾಲಿಗೆ ಸಮಯಕೋರಿದ್ದು, ಸಮಯ ನೀಡಲಾಯಿತು.**

**ಓ. ಹೇ. ಕೇ. ಸ. ಇ. ಎ. ಓಪ್ಪಿರುತ್ತಾರೆ,**

**2 ನೇ ಅ. ಸಿ. ಜ. ಮತ್ತು ಜೆ.ಎಂ.ಎಫ್.ಸಿ,**
**ಮಾಗಡಿ**